Doc 478
T-P-2

Reg No B G 155 15 — 5 — 72

55th Year of Publication ★ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸುವರ್ಣ ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ವ್ಯವಸ್ಥಾಪಕರು: ತೆರಮನೆ ಸಿರಸ್ತೆದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬಹಿಷ್ಕಾರ ಮಾಡಲು ಸಿಂಹಳ ತಮಿಳರ ನಿರ್ಧಾರ

ಮೈಸೂರಿನ ಮಹತ್ವ

ಬೆಂಗಳೂರು— ದೇಶದಲ್ಲಿ ಪ್ರಜಾಪ್ರಭುತ್ವದ ಉದಯವೇ ಇಲ್ಲಿಂದಾಗ, ಮೈಸೂರು 1884 ರಲ್ಲಿ ಪ್ರಜಾಪ್ರತಿನಿಧಿಸಭೆಯನ್ನು ಸ್ಥಾಪಿಸಿ ಪ್ರಜಾಪ್ರಭುತ್ವವನ್ನು ಜಾರಿಗೆ ತಂದಿತು ಎಂದು ಲೆಜಿಸ್ಲೇಟಿವ್ ಕೌನ್ಸಿಲ್ ಸಭಾಧ್ಯಕ್ಷರಾದ ಶ್ರೀ ಡಿಲ್ಲ್ಯಾರವರು ಶಾಸಕರ ಓರಿಯಂಟಲ್ ಸೆಮಿನಾರಿನಲ್ಲಿ ಹೇಳಿದರು — ಶಾಸಕರ ತಕ್ಷಣುಟ್ಟಗೆ ವಿತಿ ಮತ್ತು ಶಿಸ್ತು ಇರಬೇಕೆಂದೂ ಹೇಳಿದರು.

★

ಆಯುಧಗಳ ವಶ

ಪಾಟ್ನಾ— ಭಾಗಲ್ಪುರ ಸ್ಪೆಷಲ್ ಜೈಲಿನಲ್ಲಿ ತುಂಬಾ ಬಿಲ್ಲು, ಬತ್ತಳಿಕೆ, ಬಾಂಬು ಮುಂತಾದ ಮಾರಣಾಸ್ತ್ರಗಳನ್ನು ಪೋಲೀಸರು ವಶಪಡಿಸಿಕೊಂಡರು.

★

ಬಹಿಷ್ಕಾರ

ಕೊಲಂಬೊ— ತಾ॥ 22 ರಂದು ಸಿಲೋನಿನ ಗಣರಾಜ್ಯ ಸಮಾರಂಭವನ್ನು ಬಹಿಷ್ಕರಿಸಲೂ ಮತ್ತು ಪಾರ್ಲಿಮೆಂಟಿನಲ್ಲಿ ತಾ॥ 18ರಂದು ಪ್ರಧಾನಿ ಬಂಡಾರನಾಯ್ಕೆ ಯವರು ಮಂಡಿಸುವ ಹೊಸ ರಾಜ್ಯಾಂಗಕ್ಕೆ ಓಟುಮಾಡದಿರಲೂ ಸಿಲೋನಿನ ತಮಿಳರ ಸಂಯುಕ್ತ ರಾಷ್ಟ್ರೀಯ ಪಾರ್ಟಿ ಮತ್ತು ಪಾರ್ಲಿಮೆಂಟಿನಲ್ಲಿನ ಫೆಡರಲ್ ಪಾರ್ಟಿ ಮತ್ತು ತಮಿಳು ಕಾಂಗ್ರೆಸ್ ನಿರ್ಧರಿಸಿವೆ.

★

ಮಾವಿನ ಹಣ್ಣುಗಳ ವಶ

ಭಾವನಗರ— ಪರ್ಷಿಯಾ ಕೊಲ್ಲಿಯ ದೇವುಗಳಿಗೆ 12ಟ್ಟ ಅಲ್ಫಾನೋ ಮಾವಿನ ಹಣ್ಣುಗಳನ್ನು ಅಕ್ರಮವಾಗಿ ಸಾಗಿಸಲು ಪ್ರಯತ್ನಿಸುತ್ತಿದ್ದ 12 ಮಂದಿಯನ್ನು ಕಸ್ಟಂಸಿನವರು ದಸ್ತಗಿರಿ ಮಾಡಿ ಮಾವಿನ ಹಣ್ಣುಗಳನ್ನು ವಶಪಡಿಸಿಕೊಂಡರು.

ಜನಸಂಘದ ಶಂಕೆ

ನವದೆಹಲಿ— ಪಾಕಿಸ್ತಾನವನ್ನು ಮೆಚ್ಚಿಸಲು ಇಂದಿರಾ-ಭುಟ್ಟೋ ಶೃಂಗ ಸಭೆಯಲ್ಲಿ ಸರಕಾರವು ಕಾಶ್ಮೀರದ ಆಕ್ರಮಿತ ಭಾಗ ವ್ಯಾಪಾರ ನಡೆಸಬಹುದೆಂಬ ಶಂಕೆಯನ್ನು ಜನಸಂಘದ ಅಧ್ಯಕ್ಷ ಶ್ರೀ ವಾಜಪೇಯಿಯವರು ವ್ಯಕ್ತಪಡಿಸಿದರು.

○

ಚುನಾವಣಾ ಘರ್ಷಣೆ

ಹಜಾರಿಬಾಗ್— ರಾಮಘಡ ಕ್ಷೇತ್ರದಲ್ಲಿನ ಬೀಹಾರು ಶಾಸನ ಸಭಾ ಉಪ ಚುನಾವಣೆಯ ಸಂಬಂಧದಲ್ಲಿ ಭಾನುವಾರ ರಾಜಕೀಯ ಪಕ್ಷಗಳಲ್ಲಿ ಆದ ಘರ್ಷಣೆಯಲ್ಲಿ 4 ಮಂದಿ ಗಾಯಗೊಂಡರು — ಅಲ್ಲಿ ಕರ್ಫ್ಯೂ ಜಾರಿಮಾಡಲಾಗಿದೆ.

★

ಗಡಿ ವಿಷಯ

ಮೈಸೂರು— ರಾಜ್ಯ ಸರಕಾರವು ಗಡಿ ವಿಷಯದಲ್ಲಿ ಮೈಸೂರಿನ ಹಿತವನ್ನು ನಿರ್ಲಕ್ಷಿಸಿ, ಕೇಂದ್ರಕ್ಕೆ ಅಧೀನವಾಗಿದೆ ಎಂದು ಕನ್ನಡ ಚಳವಳಗಾರರ ನಾಯಕ ಶ್ರೀ ವಾಟಾಳ್ ನಾಗರಾಜರು ಹೇಳಿದರು.

●

ಡಾ॥ ಮೋದಿ

ಪದ್ಮಭೂಷಣ ನೇತ್ರದಾನಿ ಡಾ॥ ಎಂ. ಸಿ. ಮೋದಿಯವರ ಉಚಿತ ಆಪರೇಷನ್ ಶಿಬಿರವನ್ನು ಬೆಳಗಾಂನಲ್ಲಿ ತಾ॥ 20 ರಂದು ಉದ್ಘಾಟಿಸುವರು.

★

ನೀರಿನ ಸರಬರಾಜು

ಬೆಂಗಳೂರು— ತೀರ್ಥಹಳ್ಳಿ ನೀರಿನ ಸರಬರಾಜು ಸೌಕರ್ಯ ಉತ್ತಮಗೊಳಿಸಲು ಸರ್ಕಾರ ರೂ 325000 ಮಂಜೂರ್ಮಾಡಿದೆ.

ಯುದ್ಧ ಖೈದಿಗಳ ಪರಾರಿ

ಫಾತಿಘರ್— ರಜಪುತ್ ರೆಜಿಮೆಂಟು ಕೇಂದ್ರದ ಶಿಬಿರದಿಂದ 3 ಮಂದಿ ಪಾಕ್ ಯುದ್ಧ ಖೈದಿಗಳು ಪರಾರಿಯಾಗಿದ್ದಾರೆ.

★

ನೀರಿನ ನೆಂವು

ಮದರಾಸು— ಮೈಸನರಿನ ಮಂಡ್ಯ ಜಿಲ್ಲೆಯಲ್ಲಿ 40000 ಎಕ್ರೆಯಲ್ಲಿನ ಕಬ್ಬಿನ ಬೆಳೆ ಸೌಕರ್ಯಕ್ಕೆ ಕೃಷ್ಣರಾಜಸಾಗರದಲ್ಲಿ 3 ಟಿಎಂಸಿ ಅಡಿ ಹೆಚ್ಚು ನೀರು ಶೇಖರಿಸಲು ತಮಿಳುನಾಡು ಸರಕಾರ ಅನುವತಿ ನೀಡಿದೆ.

★

ಶೃಂಗ ಸಭೆ

ನವದೆಹಲಿ— ಉಪಖಂಡದಲ್ಲಿ ಶಾಶ್ವತ ಶಾಂತಿ ನೆಲೆಸುವ ಬಗ್ಗೆ ಪಾಕಿಸ್ತಾನದೊಡನೆ ಪರ್ಯಾಲೋಚನೆಯು ಚಿಲ್ಲರೆಪಲ್ಲರೆ ಮಾತಾಗಬಾರದೆಂದು ಪ್ರಧಾನಿ ಇಂದಿರಾರವರು ಹೇಳಿದರು.

●

ಧರ್ಮಬೋಧೆ

ಮಂಡ್ಯ.... ಬ್ರಾಹ್ಮಣರು ಇತರ ಕೋಮುಗಳಿಗೆ ಧರ್ಮಬೋಧೆ ಮಾಡಬೇಕಾದದ್ದು ಕರ್ತವ್ಯವೆಂದು ವಿದ್ಯಾ ಮಂತ್ರಿ ಶ್ರೀ ಬದ್ರಿ ನಾರಾಯಣರು, ಇಲ್ಲಿಯ ಬ್ರಾಹ್ಮಣ ಸಂಘವು ಏರ್ಪಡಿಸಿದ್ದ ಸನ್ಮಾನ ಸಭೆಯಲ್ಲಿ ಹೇಳಿದರು.

★

ಗಮನಾರ್ಹ ಚಿತ್ರ

ಸ್ಪೇಸ್ ಸೆಂಟರ್.... ಅಪೋಲೊ 16 ರಿಂದ 2 ಮಿಳಿಯ ಡಾಲರು ಚಿನ್ನ ಮಿಲಾಮಿನ ಕಾನುರಾದಿಂದ ತೆಗೆಯಲ್ಪಟ್ಟ ಭೂಮಿಗೆ ಮೂರನೇ ಗ್ಯಾಸ್ ಸುತ್ತಿರುವ ಪ್ರಥಮ ಚಿತ್ರವನ್ನು ವಿಜ್ಞಾನಿಗಳು ಬಿಡುಗಡೆ ಮಾಡಿದರು.

★

ಗೇಣಿದಾರರ ರಕ್ಷಣೆ

ಮಂಗಳೂರು— ಗೇಣಿದಾರರಿಗೆ ಪೂರ್ಣ ರಕ್ಷಣೆ ಕೊಡಲಾಗುವುದೆಂದು ಕಂದಾಯ ಮಂತ್ರಿ ಶ್ರೀ ಹಚ್ಚಮಾಸ್ತಿಗೌಡರು ಹೇಳಿದರು.

★

ಹಣಕ್ಕೆ ಕೇಳಿಕೆ

ನವದೆಹಲಿ— ಮೈಸೂರಿನ ನಾಲ್ಕನೇ ಯೋಜನೆಗೆ ಕೇಂದ್ರ ವಿಶೇಷ ಸಹಾಯ ರೂ 10ಕ್ಕೆ ಕೊಡಲು ಒಪ್ಪಿರುವದರ ಬಾಕಿಯನ್ನು ಬೇಗನೇ ಕೊಡುವಂತೆ ಮೈಸೂರು ಕೇಳಿದೆ.

●

ದಿಗ್ಬಂಧನ ತೆಗೆಯಲಾಯಿತು

ಅಮೇರಿಕಾ ನೌಕಾಪಡೆಯು ಉತ್ತರ ವಿಯಟ್ನಾಂ ರೇವುಗಳಿಗೆ ದಿಗ್ಬಂಧನ ಮಾಡಿದ್ದುದನ್ನು ತೆಗೆದುಹಾಕಲಾಯಿತು.

○

ಯೋಜನಾ ಮಂಡಲಿ

ಬೆಂಗಳೂರು.... ರಾಜ್ಯದ ಯೋಜನಾ ಮಂಡಲಿಯು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪುನರ್ರಚಿಸಲ್ಪಟ್ಟಿತು.

○

ಮಿಂಚಿನ ಹೊಡೆತ

ಕೋಸಿಕೋಡು .... ಮೋಲಾಡಿಯಲ್ಲಿ ಒಂದು ಮನೆಯಲ್ಲಿದ ಒಂದು ಮದುವೆ ತಂಡಕ್ಕೆ ಮಿಂಚು ಹೊಡೆದು, ಒಬ್ಬ ಸತ್ತು ನಾಲ್ಕು ಮಂದಿ ಗಾಯಗೊಂಡರು.

○

ಚೀನಾ ಮನೋಭಾವ

ವಾಷಿಂಗ್ಟನ್.... ಚೀನಾದಲ್ಲಿ ಭಾರತದ ವಿರುದ್ಧ ಪ್ರಚಂಡ ಮನೋಭಾವವು ತೀವ್ರಗೊಳ್ಳುತ್ತಿದೆಯೆಂದು ಅಲ್ಲಿಗೆ ಭೇಟಿ ಇತ್ತಿದ್ದ ಕೆಲ ಅಮೇರಿಕಾ ಸೆನೇಟರರಿಗೆ ಚೌ ಎನ್ ಲೈ ಮತ್ತಿತರ ಚೀನಾ ನಾಯಕರು ತಿಳಿಸಿದರಂತೆ.

ಐದಿಗಳ ಟ್ರೇಡ್‌ಯೂನಿರ್ಯ

ಲಂಡ್ನ— ಬ್ರಟನ್ನಿನ ಐದಿಗಳು ಒಂದು ಟ್ರೇಡ್ ಯೂನಿರ್ಯ ಸ್ಥಾ ಪಿ ಸಿ ಕೊಂಡಿರುವರು.

ದೆಹಲಿಯಲ್ಲಿ ಕನ್ನಡಿಗರ ಸಮ್ಮೇಳನ

ಮುಂಬರಲಿರುವ ಅಕ್ಟೋಬರು ತಿಂಗಳಲ್ಲಿ ದೆಹಲಿಯಲ್ಲಿ ನಡೆಯಲಿರುವ ಹೊರ ನಾಡ ಕನ್ನಡಿಗರ ಸಮ್ಮೇಳನವು ದೆಹಲಿ ಭಾಗದ ಕನ್ನಡಿಗರ ಸಮ್ಮೇಳನವು ದೆ ಹ ಲಿ ಭಾಗದ ಕನ್ನಡಿಗರ ಸಮಸ್ಯೆಗಳಷನ್ನೇ ಅಲ್ಲದೆ, ಉತ್ತರ ಭಾರತದ ಪ್ರಮುಖ ಪ್ರದೇಶ ಗಳಲ್ಲಿರುವ ಕನ್ನಡಿಗರ ಕುಂದುಕೊರತೆಗಳ ನಿವಾರಣೆ ಬಹಳಮಟ್ಟಿಗೆ ನೆರವಾಗುತ್ತ ದೆಂಬ ಅಭಿಪ್ರಾಯವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯ ಣರವರು ಈಚೆಗೆ ಡೆಲ್ಲಿಯಲ್ಲಿ ಕನ್ನಡಿಗಳ ಸಭೆಯನ್ನುದ್ದೇಶಿ ಮಾತನಾಡುತ್ತಾ ವಕ್ತ ಪಡಿಸಿದರು – ಸುಮಾರು 15 ಸಾವಿರ ಮುಂದೆ ಕನ್ನಡ ಜನರಿರುವ ದೆಹಲಿಯಲ್ಲಿ ಅವ ರ ಸಲುವಾಗಿ ಒಂದು ಒಳ್ಳೆಯ ಪುಸ್ತಕ ಭಂಡಾರವಾಗಲೀ ಪುಸ್ತಕಗಳ ಹಾಗೂ ಕನ್ನಡ ಪತ್ರಿಕೆಗಳ ಮಾರಾಟ ವ್ಯವಸ್ಥೆಯಾಗಲೀ ಸರಿಯಾದ ರೀತಿಯಲ್ಲಿರದಿರುವುದು ವಿಷಾದನ ಸಂಗತಿ ಎಂದು ಹೇಳಿದ ಅಧ್ಯಕ್ಷರು, ಅಕ್ಟೋಬರ್‌ನಲ್ಲಿ ನಡೆಯಲಿರುವ ಸಮ್ಮೇಳನವು ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಸಹಾಯವಾಗುತ್ತೆಂಬ ನಂಬಿಕೆ ಯನ್ನು ವ್ಯಕ್ತಪಡಿಸಿದರು (ಕನ್ನಡ ನುಡಿ)

★

ಸಮಿತಿ ಮತ್ತೊಂದು ನಿರ್ಣಯನ್ನು ಅಂಗೀಕರಿಸಿ, ಮನೆ ತೆರಿಗೆ ಮೈಸೂರು ನಗರ ದಲ್ಲಿ ಈಗಾಗಲೇ ವಿಪರೀತ ಹೆಚ್ಚಾಗಿರುವುದರಿಂದ ಕಂದಾಯ ಪುನರ್ವಿಮರ್ಶೆಯನ್ನು ಕೈಬಿಡುವಂತೆ ಸರ್ಕಾರವನ್ನು ಒತ್ತಾಯಿಸಿ ಮಾಡಿದೆ.

Quality Printi & Neat Binding

Lakshminarasimha Press

Sivarampet, Mysore

Help The Gorakshana



— Humanitari n Propoganda Monthly ....

Contribute Liberally

to the National Defence Fund

ವುಡ್‌ಲಾಂಡ್ಸ್ 12-5-72ರಿಂದ ಆಮೋಘ **2ನೇ ವಾರ**

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ : ರಾಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರ

ಪ್ರತಿ ದಿನ 3 ಪ್ರದರ್ಶನಗಳು

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಟಿಕೇಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ : ಪ್ರತಿ ದಿನ 10-30 ತುಂಬಿಹರಿಯೊಡ

ಅಪೆರಾ 11 5 72 ರಿಂದ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ ಶಕ್ತಿ ಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ ದೇವಿಕ, ರಮಾದೇವಿ, ಬೇಬಿ ರಾಣಿ, ಮೈಸೂರಿನ ಪೈ ॥ ಮೂಗ

ದಿನ 3 ಆಟಗಳು

★

SHAKTI

SUDHA

A Superb Tonic

' ಮಾನವನು ಕೀಳು ಸೃಷ್ಟಿಯು ಹೌದು, ಶ್ರೀಷ್ಠ ಪೆನ್ನುವುದು ಸೊಕ್ಕಿನ' ಕಲ್ಪನೆ ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಪ್ರೀ ಗನಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಅನ್ನ-ಹುಡುಗ

Protect the Cow

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4